ಡಿ.ಎಂ. ನದಾಫ
ಕಲೆ: ಗುರುನಾಥ್ ಕಟ್ಟಿ

ಪಾದ ಪ್ರೇಮಿ

ಹೌದು ನಾನು ಪಾದ ಪ್ರೇಮಿ!

ಈ ನೆಲದ ಶಾಸ್ತ್ರ ಪುರಾಣಗಳೇ ಹೇಳಿಲ್ಲವೇ
ಪಾದವೇ ನನ್ನ ಜನ್ಮಸ್ಥಾನವೆಂದು.
ಹದಿನಾಲ್ಕು ವರ್ಷ ಸಿಂಹಾಸನವೇರಿಲ್ಲವೇ
ಪಾದುಕೆಗಳು.

ನಾನು ಪಾದವಾದೆ
ನೀನು ಶಿರವಾದೆ
ಒಮ್ಮೆ ಕನಸಿನಲ್ಲಾದರೂ ನೆನೆಸಿಕೊ
'ನಾನಿಷ್ಟು ದಿನ ನಿನ್ನನ್ನು ಹೊತ್ತು ನಡೆದೆ ಮುಂದಿನ ಸರದಿ ನಿನ್ನದು!
ಇನ್ನು ಶಿರದ ಸ್ಪರ್ಶ ಭೂಮಿಗೆ
ಪಾದಗಳ ಮುಖ ಮುಗಿಲಿಗೆ' ಎಂದು ನಾನಂದು ಬಿಟ್ಟರೆ?

ಇಲ್ಲೂ ನಿನ್ನ ಗುಳ್ಳೆನರಿ ಬುದ್ಧಿ ಬಿಡಲಿಲ್ಲ
ನೀನು ತೋರಿಸಿಯೇ ಬಿಟ್ಟೆ.
ಹೇಳಿದೆ,
'ಅದು ಹಾಗಲ್ಲ! ಶಿರವು ಮೇಲಿದ್ದರೇನು
ಸಾಷ್ಟಾಂಗ ಹಾಕುವೆ!
ಪಾದಗಳಿಗೆ ಎರಗುವೆ' ಎಂದೆ.
ಇದ ನಂಬಿ
ಅಂದಿನಿಂದ ಇಂದಿನವರೆಗೂ ಹೀಗೆ ನಡೆದಿದೆ.

ಶಿರವು ನಡೆಯಲಿಲ್ಲ, ನರಳಲಿಲ್ಲ.
ಪಾದಸಂಜಾತರು ಪಟ್ಟಕ್ಕೆ ಏರಲಿಲ್ಲ
ದೇಶ ಆಳಲಿಲ್ಲ.